ಶ್ರೀ ಬಿ. ಬಸವಲಿಂಗಪ್ಪ.—ಜುಲೈ ಆಖೈರ್‌ನೊಳಗೆ ಇವೆಲ್ಲವನ್ನೂ ಪೂರೈಸಬೇಕು ಎಂದು ಹೇಳಿ ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ. ಅವೆಲ್ಲಾ ಮುಗಿದಿರಬೇಕು ಎಂದು ಕಾಣುತ್ತದೆ. ನಾನು ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ ಅವೆಲ್ಲವನ್ನೂ ಹಾಗೆ ಉಳಿಸುವುದಿಲ್ಲ. ಈ ತಿಂಗಳಿನೊಳಗಾಗಿ ಎಲ್ಲವನ್ನೂ ಮುಗಿಸಬೇಕು ಎಂದು ತೀರ್ಮಾನ ಮಾಡಿದ್ದೇವೆ.

Pension Settlement of Ex-District-Board Employees

39. SRI SHEERANALY CHANDRASEKHAR (Hosanagar).—Will the Minister for Rural Development and Panchayat Raj be pleased to state :—

(*a*) whether it has come to the notice of Government that settlement of retirement benefits/pension to the employees of the erstwhile District Boards who have been absorbed in Government service or in Taluk Development Boards and also employees of Defunct Boards are being delayed ;

(*b*) if so, the reasons for the same, what steps Government propose to take to settle the pension claims of the such poor retired officials ?

SRI K. PRABHAKAR (Minister for Rural Development and Panchayatraj).—

(*a*) No.

(*b*) In view of reply to (a) above this does not arise.

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್.—ಒಬ್ಬ ಶಾಸಕ ಪ್ರಶ್ನೆ ಕೇಳಬೇಕಾದರೆ ಆಧಾರವಿಲ್ಲದೆ ಕೇಳುವುದಿಲ್ಲ. ಆದರೆ ಇಲ್ಲಿ ನನ್ನ ಎಲ್ಲ ಪ್ರಶ್ನೆಗಳಿಗೂ 'ಇಲ್ಲ', 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಈ ರೀತಿ ಉತ್ತರ ಕೊಡುವುದಾದರೆ ನಾವು ಪ್ರಶ್ನೆ ಕೇಳುವ ಅಗತ್ಯವೇ ಇಲ್ಲವೆಂದು ಕಾಣುತ್ತದೆ. ಈ ನೌಕರರ ನಿವೃತ್ತಿ ವೇತನದ ಬಗ್ಗೆ ಅನೇಕ ಪತ್ರವ್ಯವಹಾರಗಳು ನಡೆದಿವೆ. ಒಬ್ಬರನ್ನು ಕೇಳಿದರೆ ಲಾ–ಡಿಪಾರ್ಟಮೆಂಟ್‌ನಲ್ಲಿದೆ ಎಂದು ಹೇಳುತ್ತಾರೆ. ಇನ್ನೊಬ್ಬರನ್ನು ಕೇಳಿದರೆ ಮತ್ತೊಂದು ಹೇಳುತ್ತಾರೆ. ಇದೇ ರೀತಿ ಕಳೆದ ಅನೇಕ ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ. ನನ್ನ ಒಂದು ಅನುಭವದಿಂದ ಈ ಪ್ರಶ್ನೆ ಕೇಳಿರುವುದು, ತಾವು ಇದನ್ನು ಏನಾದರೂ ವಿಚಾರಣೆ ಮಾಡಿದ್ದೀರಾ ?

† ಶ್ರೀ ಕೆ. ಪ್ರಭಾಕರ್.—ನನ್ನ ಅನುಭವದ ಮೇಲೆ ಇಲ್ಲಿ, 'ಇಲ್ಲ' ಎಂದು ಉತ್ತರ ಕೊಟ್ಟಿರುವುದು. ಇದರ ಅರ್ಥ ಏನೆಂದರೆ ವ್ಯವಹಾರ ಇನ್ನೂ ಮುಗಿದಿಲ್ಲ, ಅದು ಇನ್ನೂ ಅಂತ್ಯಕ್ಕೆ ಬಂದಿಲ್ಲ ಎಂದು. ಕೆಳಗಿನ ಹಂತದಲ್ಲಿ ಅಂದರೆ between the Accountant General and the Divisional Commissioner ಅವರ ಹತ್ತಿರ ವ್ಯವಹಾರ ಮಾಡಿ ಎಂಬುದಾಗಿ ಅವರುಗಳಿಗೆ ಡೈರಕ್ಷನ್ ಕೊಟ್ಟಿದೆ. ಅವರು ಈ ವ್ಯವಹಾರವನ್ನು ಬಗೆಹರಿಸುತ್ತಾರೆಂದು ನಮಗೆ ಗೊತ್ತಾಗಿದೆ. ತಾವು ಲೇಟಿಸ್ಟ್ ಪೊಜಿಷನ್ ಕೇಳುತ್ತೀರಾ ಎಂದುಕೊಂಡು ಈ ರೀತಿ ಉತ್ತರ ಕೊಡಲಾಗಿದೆ.

ಶ್ರೀ ಎಸ್. ಎಂ. ಶಿರ್ನಾಳಿ ಚಂದ್ರಶೇಖರ್.—ಅಕೌಂಟೆಂಟ್ ಜನರಲ್ ಅವರು ತೀರ್ಮಾನ ತೆಗೆದುಕೊಳ್ಳಬೇಕೆಂದು 'ತಾವು ಉತ್ತರ ಕೊಡುವುದು' ಏನಿದೆ ಅದು ಕಳೆದ ನಾಲ್ಕೈದು ವರ್ಷಗಳಿಂದ ನಡೆದುಕೊಂಡು ಬಂದಿದೆ. ಈ ಬಡ ನೌಕರರು ಅಲ್ಪಸ್ವಲ್ಪ ಸಂಬಳದಿಂದ ಜೀವನ ಮಾಡಿಕೊಂಡು ಬಂದಿರುವವರು. ಇಂತಹವರಿಗೆ ವಿಶ್ರಾಂತಿ ವೇತನ ಕೊಡಲಂ ಇಷ್ಟೊಂದು ವಿಳಂಬವಾಗಲು ಕಾರಣವೇನು ?

ಶ್ರೀ ಕೆ. ಪ್ರಭಾಕರ್.—ಎಲ್ಲರ ವಿಷಯದಲ್ಲಿಯೂ ವಿಳಂಬವಾಗಿಲ್ಲ. ವಿನಾದರೂ ವಿಳಂಬವಾಗಿದ್ದರೆ, ಅದು ಸರಿಯಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ವಿಶ್ರಾಂತಿವೇತನವನ್ನು ರಿಟೈರ್ ಆದಮೇಲೆ ಅನುಭವಿಸುವುದಕ್ಕೆ ಎಂದು ಮಾಡಿರುವುದು. ಇದನ್ನು ಅವರು ಬದುಕಿರುವಾಗಲೇ ಕೊಡುತ್ತೀರೋ ಅಥವಾ ಅವರು ಪಾಪತಿ ಆದಮೇಲೆ ಕೊಡುತ್ತೀರೋ ?

ಶ್ರೀ ಕೆ. ಪ್ರಭಾಕರ್.—ಯಾರು ಎಷ್ಟು ದಿವಸ ಬದುಕಿರುತ್ತಾರೆಂದು ಹೇಳುವುದು ಕಷ್ಟ. ಕೆಲವರಿಗೆ ಮೊದಲೇ ತೀರ್ಮಾನವಾಗಬಹುದು, ಮತ್ತೆ ಕೆಲವರಿಗೆ ತಾವು ಹೇಳಿದಂತೆ ಆಮೇಲೆ ಆಗುವುದೂ ಉಂಟು.

ಶ್ರೀ ಎಸ್. ಎಂ. ಶಿವಾಳಿ ಚಂದ್ರಶೇಖರ್.—ಮಾನ್ಯ ತಮ್ಮಯ್ಯನವರು ಬಹಳ ಖಚಿತವಾಗಿ ಪ್ರಶ್ನೆ ಕೇಳಿದ್ದಾರೆ. ನನ್ನ ಅನುಭವದಲ್ಲಿ ಸರ್ಕಾರದ ಈ ವಿಳಂಬದ ನೀತಿಯಿಂದಾಗಿ ಕೆಲವರು ಈಗಾಗಲೇ ಪಾಪತಿಯಾಗಿದ್ದಾರೆ. ಇಂತಹವರ ಕುಟುಂಬದವರಿಗಾದರೂ ಈ ಒಂದು ಸಲಹತ್ತುಗಳನ್ನು ಕಲ್ಪಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಪ್ರಭಾಕರ್,—ವ್ಯವಸ್ಥೆ ಮಾಡುತ್ತೇವೆ.

ಶ್ರೀ ಜಿ. ಬಿ. ಶಂಕರ್‌ರಾವ್.—ಜಿಲ್ಲಾ ಮಂಡಲಿಗಳು ರದ್ದಾಗಿ ೮-೧೦ ವರ್ಷಗಳಾಯಿತು. ಅದರೂ ಇಷ್ಟೊಂದು ವಿಳಂಬವಾಗಲು ಕಾರಣವೇನು ? ಎ. ಜಿ. ಕಛೇರಿಗೂ ಮತ್ತು ವಿಧಾನಸೌಧಕ್ಕೂ ಬಹಳ ದೂರವೇನೂ ಇಲ್ಲ. ಆದರೂ ಇಷ್ಟೊಂದು ನಿಧಾನವಾದರೆ ಈ ನೌಕರರ ಗತಿಯೇನು ?

ಶ್ರೀ ಕೆ. ಪ್ರಭಾಕರ್.—ಕಛೇರಿಗಳು ಹತ್ತಿರವಿರಬಹುದು, ಆದರೆ ಫಿಜಿಕಲ್ ಆಗಿ ಫೈನ್ ಮೂಲಕ ಪತ್ರಗಳನ್ನು ಕಳುಹಿಸುವುದು ವಿಳಂಬ ಎಂದು ನಾನು ತಿಳಿಯುವುದಿಲ್ಲ. To solve the problem involved, the time taken to arrive at a final solution according to law is called Vilamba.

ಶ್ರೀ ಜಿ. ಬಿ. ಶಂಕರರಾವ್.—ತಮ್ಮ ಒಂದು ಅನುಭವದ ಪ್ರಕಾರ ಇದು ತೀರ್ಮಾನವಾಗಲು ಇನ್ನೂ ಎಷ್ಟು ಸಮಯಬೇಕು ? ಕಾನೂನು ಅಷ್ಟೊಂದು ತೊಡಕಾಗಿದೆಯೆ ?

ಶ್ರೀ ಕೆ. ಪ್ರಭಾಕರ್.—ಇಲ್ಲಿ ನಾವು ಮೂರು ಪ್ರಾಂತ್ಯಗಳ ನೌಕರರುಗಳ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ. ಮದ್ರಾಸ್, ಮುಂಬೈ ಮತ್ತು ಕರ್ನಾಟಕ ಪ್ರಾಂತ್ಯಗಳಲ್ಲಿ ಆ ಕಾಲಕ್ಕೆ ಫ್ಯಾಮಿಲಿ ಪೆನ್‌ಷನ್ ಫ್ಯಾಮಲಿ ಬೆನಿಫಿಟ್ ಮತ್ತು ಪ್ರಾವಿಡೆಂಟ್ ಫಂಡ್ ಇವುಗಳು ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಇದ್ದವು. ಆ ಭಾಗದವರು ನಮ್ಮ ಭಾಗಕ್ಕೆ ಬಂದಮೇಲೆ ನಾವು ಏಕೈಕವಾದಂಥ ಕಾನೂನನ್ನು ಜಾರಿ ಮಾಡಬೇಕಾಗುತ್ತದೆ, ಈಗ ಕೊಂಚಮಟ್ಟಿಗೆ ಕೊಟ್ಟಿದ್ದೇವೆ. ಫೈನಲ್ ಮಾಡುವಾಗ ಅವರಿಗೆ ಯಾವ ರಾಜ್ಯದ ಕಾನೂನಿನ ಪ್ರಕಾರ ಕೊಟ್ಟರೆ ಅನುಕೂಲವಾಗುತ್ತದೆಂದು ಅವರನ್ನೇ ನಾವು ಕೇಳಿದ್ದೇವೆ. ಈ ಪಂತದಲ್ಲಿ ತಡವಾಗಿದೆ. ಅವರು ಯಾವುದನ್ನು ಕೋರುತ್ತಾರೋ, ಅದನ್ನು ನಾವು ಕೊಡುತ್ತೇವೆ. ಇದು ಅವರಿಂದ ತಡವಾಗಿರುವುದರಿಂದ. ನಮ್ಮ ಖಾತೆಯಲ್ಲಿ ತಡವಾಗಿದೆ ಎಂಬುದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ಚೌಡಯ್ಯ.—ಈ ಜಿಲ್ಲಾ ಮಂಡಲಿಗಳು ರದ್ದಾಗಿ ೨೦ ವರ್ಷಗಳಾಯಿತು ೧೯೭೨-೭೩ರಲ್ಲಿ ನಾವು ಸಹ ತಾಲ್ಲೂಕ್ ಬೋರ್ಡ್ ಅಧ್ಯಕ್ಷನಾಗಿದ್ದಾಗ ಈ ಬಗ್ಗೆ ವ್ಯವಹಾರ ಮಾಡಿದ್ದೇನೆ. ಆದರೂ ಇದು ಸರ್ಕಾರದ ಗಮನಕ್ಕೆ ಬಂದಿಲ್ಲ, ಇದು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಹಾಗೂ ವಿಭಾಗಾಧಿಕಾರಿಗಳ ಮಟ್ಟದಲ್ಲಿದೆ ಎಂದು ಹೇಳುವುದನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಇದನ್ನು ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿ ತಾವು ಉತ್ತರ ಕೊಡಬೇಕು ?

ಶ್ರೀ ಕೆ. ಪ್ರಭಾಕರ್.—ಇದು ಸರ್ಕಾರದ ಗಮನಕ್ಕೆ ಬಂದಿದೆ, ಇದಕ್ಕೆ ಸಂಬಂಧಪಟ್ಟ ದೊಡ್ಡ ಫೈಲು ನನ್ನ ಮುಂದಿದೆ. ನಾನು ಹೇಳಿದ್ದು ಲೇಟೆಸ್ಟ್ ಪೊಜಿಷನ್. ಇದರಲ್ಲಿ ಪುನರ್ ಪರಿಶೀಲನೆ ಮಾಡಬೇಕಾದಂಥ ಕೆಲವು ಅಂಶಗಳಿರುವುದರಿಂದ, ಆ ಬಗ್ಗೆ ಬೇಗ ನಿಗಾ ಕೊಟ್ಟು ಪರಿಹರಿಸುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಎಚ್. ಡಿ. ಚೌಡಯ್ಯ.—ಇದಕ್ಕೆ ಒಂದು ಕಾಲಮಿತಿಯನ್ನು ಗೊತ್ತು ಮಾಡಬೇಕು. ಇದು ೩೦ ವರ್ಷದ ಹಳೆಯ ಕೇಸು. ಈಗಾಗಲೇ ಎಷ್ಟೋ ಜನರು ಸತ್ತು ಹೋಗಿದ್ದಾರೆ. ಆದಕಾರಣ ೧೫–೨೦ ದಿವಸಗಳಲ್ಲಿ ಅಥವಾ ಎಷ್ಟು ತಿಂಗಳಲ್ಲಿ ಬಗೆಹರಿಸುತ್ತೀರಾ ಎಂಬುದನ್ನು ತಿಳಿಸಬೇಕು ?

ಶ್ರೀ ಕೆ. ಪ್ರಭಾಕರ್.—ಇದು ೧೫ –೨೦ ದಿವಸಗಳಲ್ಲಿ ಆಗುವ ಕೆಲಸವಲ್ಲ. ಇದೇನೂ ಮಣ್ಣಿನ ಕಾಮಗಾರಿಯಲ್ಲ. ಇದರಲ್ಲಿ ಯಾರು ಯಾರು ಇನ್‌ವಾಲ್ವ್ ಆಗಿದ್ದಾರೆ. ಅವರಿಗೆಲ್ಲಾ ಬರೆದಿದ್ದೇವೆ.

ಶ್ರೀ ಎಚ್. ಡಿ. ಚೌಡಯ್ಯ.—ಇದು ಮಣ್ಣಿನ ಕಾಮಗಾರಿಯಲ್ಲವೆಂದು ಹೇಳುತ್ತಿದ್ದಾರೆ. ಆದರೆ ಆ ವಿಷಯವನ್ನು ನಾವು ಕೇಳಲಿಲ್ಲ. ನಾವು ಕೇಳಿದ್ದು, ಈ ನೌಕರರ ವಿಷಯವನ್ನು ?

ಶ್ರೀ ಕೆ. ಪ್ರಭಾಕರ್.—ನಾನು ಹೇಳಿದ್ದು ಒಂದು ಕೆರೆ ಕಟ್ಟಬೇಕಾದರೆ, ಎಷ್ಟು ಅಳತೆಗಳು ಕೆಲಸ ಮಾಡಿದರೆ ಎಷ್ಟು ದಿವಸಗಳಲ್ಲಿ ಮುಗಿಸಬಹುದೆಂದು ಲೆಕ್ಕಾಚಾರ ಹಾಕುವುದಕ್ಕೆ ಅವಕಾಶವಿರುತ್ತದೆ. ಅದರಂತೆ ಈ ವಿಧಾನಸೌಧವನ್ನು ಕಟ್ಟಲು ಎಷ್ಟು ಸಮಯ ಬೇಕು ಎಂಬುದನ್ನು ಲೆಕ್ಕಾಚಾರ ಮಾಡಿ ಹೇಳಬಹುದು. ಅದರೆ ಇಲ್ಲಿ ಏನಾಗಿದೆ ಎಂದರೆ ೩ ಸಂಸ್ಥಾನಗಳ ಕಾನೂನನ್ನು ಸಮನ್ವಯ ಮಾಡಿ ಫೈನಲ್ ಮಾಡಬೇಕಾಗಿದೆ. ಇಲ್ಲಿ ಯಾವ ಸ್ಟೇಟ್ ಪ್ರಕಾರ ನಿಮಗೆ ಅನುಕೂಲವಿದೆ ಎಂಬುದನ್ನು ತಿಳಿಸಬೇಕೆಂದು ಅವರಿಗೆ ಬರೆದಿದ್ದೇವೆ. ಅದರಂತೆ ಅವರಿಗೆ ಅನುಕೂಲವಾದ ಬೆನಿಫಿಟ್‌ನ್ನು ತೆಗೆದು ಕೊಳ್ಳಬಹುದೆಂದು ಹೇಳಿದ್ದೇವೆ. ಇದನ್ನು ಅವರ ಒಂದು ಚಾಯ್ಸ್‌ಗೆ ಬಿಟ್ಟಿದ್ದೇವೆ. ಅದರಂತೆ ಅವರು ನಮಗೆ ತಿಳಿಸುವುದರಲ್ಲಿ ವಿಳಂಬವಾಗಿದೆ. ಅವರು ಒಂದು ಸಲ ಒಪ್ಪಿದ ಮೇಲೆ ಮತ್ತೆ ಇದು ನಿಧಾನವಾಗುವುದಿಲ್ಲ. ಲೆಕ್ಕಾಚಾರ ಮಾಡಿ ಅವರು ನಮಗೆ ತಿಳಿಸುವುದರಲ್ಲಿ ನಿಧಾನವಾಗಿದೆ. ಯಾವಾಗ ಅವರು ನಮಗೆ ವಿವರ ಕೊಡುತ್ತಾರೆ, ಅಲ್ಲಿಂದೀಚೆಗೆ ಇದು ತಡವಾಗುವುದಿಲ್ಲ. ಅವರು ಮಾಡುವ ಕೆಲಸದಿಂದ ಇದು ವಿಳಂಬವಾಗಿರುವುದರಿಂದ, ನಾವು ಇದನ್ನು ಇಷ್ಟೆ ದಿವಸಗಳಲ್ಲಿ ಮಾಡುತ್ತೇವೆಂದು ಗ್ಯಾರೆಂಟಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ಮಾನವೀಯತೆಯ ದೃಷ್ಟಿಯಿಂದ ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಸಣ್ಣ ಪುಟ್ಟ ನೌಕರರು ಪೆನ್‌ಷನ್ ಬರುತ್ತದೆಂದು ಆಕ್ಕ ಪಕ್ಕದ ಮನೆಯವರ ಹತ್ತಿರ ಸಾಲಸೋಲ ಮಾಡಿಕೊಂಡು ಜೀವನ ಮಾಡುತ್ತಿರತಕ್ಕಂಥ ದಾರುಣ ವಿಚಾರ ಇದು. ೨೦ ವರ್ಷಗಳಿಂದ ಪೆನ್‌ಷನ್ ಇಲ್ಲದೆ ಒದ್ದಾಡುತ್ತಿರುವವರ ಬಗ್ಗೆ ನಾನು ಪ್ರಶ್ನೆ ಹಾಕಿದರೆ ತಾವು ಖಚಿತವಾದ ಉತ್ತರಕೊಡುವುದಿಲ್ಲ. ಎಂದರೆ ಬಹಳ ವ್ಯಸನವಾಗುತ್ತದೆ. ೧೫ ದಿವಸಗಳಲ್ಲಿ ಇದನ್ನು ಮಾಡುತ್ತೀರೋ ಆಥವಾ ೨೦ ದಿವಸಗಳಲ್ಲಿ ಮಾಡುತ್ತೀರೋ ಇಷ್ಟು ದಿವಸಗಳಲ್ಲಿ ಮಾಡುತ್ತೇವೆಂದು ಹೇಳಬಾರದಾ ? ದೊಡ್ಡ ದೊಡ್ಡ ಅಧಿಕಾರಿಗಳಿಗೆ ಅವರ ಕೇಸುಗಳನ್ನು ಸೆಟಲ್ ಮಾಡಿ ಪೇಮೆಂಟ್ ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಈ ಸಣ್ಣ ಪುಟ್ಟ ನೌಕರರರಿಗೆ ಕೊಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿದರೆ ಹೇಗೆ ? ೧೦–೨೦ ದಿವಸಗಳಲ್ಲಿ ಮಾಡುತ್ತೇವೆಂದು ಹೇಳಿ ಆಶ್ವಾಸನೆ ಕೊಟ್ಟರೆ ಶಾಂತ ರೀತಿಯಿಂದ ಅವರು ಬದುಕುತ್ತಾರೆ.

ಶ್ರೀ ಕೆ. ಪ್ರಭಾಕರ್.—ಈ ವಿಚಾರ ಸರ್ಕಾರಕ್ಕೆ ಸಂಪೂರ್ಣವಾಗಿ ಗೊತ್ತಿದೆ. ಬೇಗ ನೀವಾರಣೆ ಮಾಡಿಕೊಡಬೇಕೆಂಬ ಇಚ್ಛೆ ಕೂಡ ಸರ್ಕಾರಕ್ಕೆ ಇದೆ. ಬೇಗ ಮಾಡಿಕೊಡುತ್ತೇವೆ. ದಿನ ಮತ್ತು ಘಂಟೆ ರೀತಿಯಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದಷ್ಟು ಬೇಗ ಮಾಡಿಕೊಡುತ್ತೇವೆ. ನೀವು ಕೇಳುತ್ತಿರುವ ದಿವಸಗಳಿಗಿಂತ ಮುಂಚೆಯೇ ಆಗಬಹುದೆಂದು ನನ್ನ ಮನಸ್ಸಿನಲ್ಲಿದೆ.

ಅಧ್ಯಕ್ಷರು.—ಪ್ರಶ್ನೆ ನಂ. ೬೬೯ ತಡೆಹಿಡಿಯಲಾಗಿದೆ. ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.

QUESTIONS FOR ANSWERS ON THE DAY
(but not taken up)

Repair of roads in Channagiri Taluk

654. SRI J. H. PATEL (Channagiri).—Will the Minister for Public Works be pleased to state:—

(a) whether Government are aware of the bad condition of Roads in Channagiri Taluk;